**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ ರವರ ನ್ಯಾಯಾಲಯ, ನರಸಿಂಹರಾಜಪುರ**

ಸಿ. ಸಿ. ನಂ:**168/2026**

ಫಿರ್ಯಾದುದಾರರು: ಸರ್ಕಾರದ ಪರವಾನಗಿ ಎನ್. ಆರ್. ಪುರ ಪೊಲೀಸರು

ವಿರುದ್ಧ

ಆರೋಪಿ : **2.** ಶ್ರೀಮತಿ ಮೋಳಿ, ಕೋಂ. ಸದಾನಂದನ್,
**70** ವರ್ಷ, ವಾಸ : ಪಲಾಕುಂನ್ನುಮ್ಮಲ್,
ತಮರಾಸ್ಸೇರಿ ಪೋಸ್ಟ್, ಕೋಜಿಕೋಡ್ ಜಿಲ್ಲೆ,
ಕೇರಳ ರಾಜ್ಯ.

## ಆರೋಪಣೆ

ದಿನಾಂಕ: 13.02.2026 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ ನ.ರಾ.ಪುರ ಪೊಲೀಸ್ ಠಾಣಾ ವ್ಯಾಪ್ತಿಯ ನ.ರಾ.ಪುರ ನಗರದ ಅಗ್ರಹಾರದ ಬಳಿ ಶ್ರೀ ರಾಘವೇಂದ್ರ ಪ್ರಾವಿಜನ್ ಸ್ಟೋರ್ಸ್ ಮುಂಭಾಗ ನ.ರಾ.ಪುರ – ಕೊಪ್ಪ ಮುಖ್ಯ ಸಿಮೆಂಟ್ ರಸ್ತೆಯಲ್ಲಿ 1 ನೇ ಆರೋಪಿ ಮಂಜುಳರವರ ಬಾಬ್ತು ಕೆ.ಎಲ್.57 – ಎನ್.7905 ರಿಜಿಸ್ಟ್ರೇಷನ್ ನಂಬರಿನ ಯಮಹಾ ಕಂಪನಿಯ Fascino ಸ್ಕೂಟಿಯನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗುತ್ತಿರುವಾಗ ನಾಯಿ ಅಡ್ಡಬಂದಿದ್ದರಿಂದ ತಕ್ಷಣ ಬ್ರೇಕ್ ಹಾಕಿದ್ದು, ಸ್ಕೂಟಿ ನಿಯಂತ್ರಣ ತಪ್ಪಿ ಬಿದ್ದು ಅಪಘಾತವಾಗಿದ್ದು, ಈ ಅಪಘಾತವಾಗಲು 2 ನೇ ಆರೋಪಿಯು 1 ನೇ ಆರೋಪಿತರ ಬಳಿ ಚಾಲನಾ ಪರವಾನಿಗೆ ಇಲ್ಲದಿದ್ದರೂ ಅನಧಿಕೃತ ವ್ಯಕ್ತಿ 2 ನೇ ಆರೋಪಿಯಾದ ನಿಮಗೆ ಸದರಿ ಸ್ಕೂಟಿಯನ್ನು ಚಾಲನೆ ಮಾಡಲು ನೀಡಿರುತ್ತೀರಿ. ಆ ಮೂಲಕ ನೀವು ಭಾ.ಮೋ.ವಾ. ಕಾಯಿದೆ ಕಲಂ 180 ಮತ್ತು 181 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದೊಳಗೆ ಎಸಗಿರುತ್ತೀರಿ.

ಈ ಮೇಲೆ ಹೇಳಿದ ದಿನಾಂಕ, ಸ್ಥಳ, ಸಮಯದಲ್ಲಿ 2 ನೇ ಆರೋಪಿಯಾದ ನೀವು 1 ನೇ ಆರೋಪಿಯು ಚಲಾಯಿಸುತ್ತಿದ್ದ ವಾಹನಕ್ಕೆ ವಿಮೆ ಮಾಡಿಸದೆ ಚಾಲನೆ ಮಾಡಲು ನೀಡಿರುತ್ತೀರಿ. ಆ ಮೂಲಕ ನೀವು ಭಾ.ಮೋ.ವಾ. ಕಾಯಿದೆ ಕಲಂ 196 ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದೊಳಗೆ ಎಸಗಿರುತ್ತೀರಿ.

ಪ್ರ:1 : ಈಗ ಓದಿ ಹೇಳಿದ ಆಪಾದನೆ ತಿಳಿಯಿತೇ?

ಉ: ತಿಳಿಯಿತು.

ಪ್ರ:2. ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉ: ತಪ್ಪು ಒಪ್ಪಿಕೊಳ್ಳುತ್ತೇನೆ

ಈ ಮೇಲ್ಕಂಡ ಆಪಾದನೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ: 23 ನೇ ದಿವಸ ಜೂನ್ ಮಾಹೆ 2026.

23/6/26.

(ರಘುನಾಥ ಗೌಡ ಕೆ.ಟಿ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ:
ನ.ರಾ.ಪುರ.

ಆರೋಪಿಯ ಸಹಿ: